# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಯವರ ನ್ಯಾಯಾಲಯ, ಸೋಮವಾರಪೇಟೆ

ದಿನಾಂಕ: 06-08-2022

**ಸಿ.ಸಿ.ಸಂಖ್ಯೆ: 236/2022**

ಫಿರ್ಯಾದಿ : ಶ್ರೀಮತಿ ಹೆಚ್.ಆರ್.ಶೋಭಾ ಕೋಂ ದೊಡ್ಡಯ್ಯ,

::ವಿರುದ್ಧ::

ಆರೋಪಿ : ಶ್ರೀ ಸಿದ್ದೇಶ್ ಬಿನ್ ಹರೀಶ್,
ವಯಸ್ಸು 35 ವರ್ಷ,
ವಾಸ: ವೀರಭದ್ರೇಶ್ವರ ದೇವಸ್ಥಾನದ ರಸ್ತೆ,
ಕೊಡ್ಲಿಪೇಟೆ ಟೌನ್,
ಸೋಮವಾರಪೇಟೆ ತಾಲ್ಲೂಕು,
ಕೊಡಗು ಜಿಲ್ಲೆ.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ1:-ಫಿರ್ಯಾದುದಾರರು ನುಡಿದಿರುವ ಸಾಕ್ಷ್ಯವನ್ನು ತಿಳಿದುಕೊಂಡಿರುವೆಯಾ?

ಉತ್ತರ:-

ಪ್ರಶ್ನೆ2:-ಚಾ.ಸಾ-1 ಶ್ರೀಮತಿ ಹೆಚ್.ಆರ್.ಶೋಭಾ ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಆರೋಪಿಯಾದ ನೀವು ಫಿರ್ಯಾದಿಯವರಿಂದ ತಮ್ಮ ತುರ್ತು ಅವಶ್ಯಕತೆಗಾಗಿ ದಿ:11-10-2021 ರಂದು ಫಿರ್ಯಾದಿಯವರ ಮನೆಯಲ್ಲಿ ರೂ.3,20,000/-ಗಳನ್ನು ನಗದು ರೂಪದಲ್ಲಿ ಸಾಲವಾಗಿ ಪಡೆದುಕೊಂಡಿರುವುದಾಗಿ ಸಾಕ್ಷಿ ನುಡಿದಿದ್ದಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:-

ಪ್ರಶ್ನೆ3:- ಚಾ.ಸಾ.-1 ಶ್ರೀಮತಿ ಹೆಚ್.ಆರ್.ಶೋಭಾ ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನುಡಿದಿರುವುದೇನೆಂದರೆ, ಆರೋಪಿಯಾದ ನೀವು ಸದರಿ ಸಾಲದ ಮರುಪಾವತಿಗಾಗಿ ದಿನಾಂಕ 25-04-2022 ಕ್ಕೆ ನಗದಾಗುವಂತೆ ಕೆನರಾ ಬ್ಯಾಂಕ್, ಕೊಡ್ಲಿಪೇಟೆ ಶಾಖೆಯ ಚೆಕ್ ನಂ.061169 ರೂ. 3,20,000/- ಮೌಲ್ಯದ ಒಂದು ಚೆಕ್ಕನ್ನು ನೀಡಿರುತ್ತೀರಿ ಎಂದು ನಿಮ್ಮ ವಿರುದ್ಧ ಸಾಕ್ಷಿ ನುಡಿದಿದ್ದಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:-

ಪ್ರಶ್ನೆ4:- ಚಾ.ಸಾ.-1 ಶ್ರೀಮತಿ ಹೆಚ್.ಆರ್.ಶೋಭಾ ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನುಡಿದಿರುವುದೇನೆಂದರೆ, ನೀವು ಕೊಟ್ಟಿದ್ದ ಚೆಕ್ಕನ್ನು ನಗದೀಕರಿಸಲು ಬ್ಯಾಂಕ್ ಗೆ ಹಾಜರುಪಡಿಸಿದಾಗ ಬ್ಯಾಂಕಿನವರು "Drawers signature incomplete/illegible/differs/ required" ಮತ್ತು “ Account blocked” ಎಂಬ ಹಿಂಬರಹಗಳೊಂದಿಗೆ ದಿ:25-04-2022 ರಂದು ಹಿಂದಿರುಗಿಸಿರುತ್ತಾರೆಂದು ನಿಮ್ಮ ವಿರುದ್ಧ ಸಾಕ್ಷಿ ನುಡಿದಿದ್ದಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:-

ಪ್ರಶ್ನೆ5:- ಚಾ.ಸಾ.-1 ಶ್ರೀಮತಿ ಹೆಚ್.ಆರ್.ಶೋಭಾ ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನುಡಿದಿರುವುದೇನೆಂದರೆ, ಚೆಕ್ ನ ಹಣ ಕೊಡುವಂತೆ ದಿನಾಂಕ 25-04-2022 ರಂದು ನೋಂದಾಯಿತ ಅಂಚೆ ಮೂಲಕ ನೋಟೀಸ್ ನೀಡಿದ್ದು, ಆ ನೋಟೀಸನ್ನು ದಿ: 28-04-2022 ರಂದು ಪಡೆದುಕೊಂಡಿದ್ದು, ನೋಟೀಸಿಗೆ ಉತ್ತರವನ್ನೂ ನೀಡದೇ, ಇದುವರೆಗೂ ನೀವು ಚೆಕ್ ನ ಹಣ ಕೊಟ್ಟಿಲ್ಲವೆಂದು ಸಾಕ್ಷಿ ನುಡಿದಿದ್ದಾರೆ ಇದಕ್ಕೆ ನಿಮ್ಮ ಉತ್ತರವೇನು?

ಉತ್ತರ:-

ಪ್ರಶ್ನೆ6:- ನಿಮ್ಮ ಪರವಾಗಿ ಏನಾದರೂ ಹೇಳುವುದಿದೆಯೇ?

ಉತ್ತರ:

ಪ್ರಶ್ನೆ 7:- ನಿಮ್ಮ ಪರವಾಗಿ ಸಾಕ್ಷಿಗಳಿವೆಯೇ?

ಉತ್ತರ:-

(ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಗಿದೆ)

ಸಹಿ/-
(ಶ್ರೀ ಗೋಕುಲ ಕೆ.)
ಹಿರಿಯ ಸಿವಿಲ್ ಮತ್ತು ಪ್ರ.ದ.ನ್ಯಾದಂ.
ಸೋಮವಾರಪೇಟೆ.